

# ಸಮ್ಮತಿಸಿದ ಲೈಂಗಿಕ ಕ್ರಿಯೆ ಕಾನೂನಿನ ಚೌಕಟ್ಟೇನು?

ಹದಿಹರೆಯದ ಹುಡುಗ–ಹುಡುಗಿ ಮಧ್ಯೆ ಸಮ್ಮತಿಸಿದ ಲೈಂಗಿಕ ಕ್ರಿಯೆ ನಡೆಯುವ ಬಗ್ಗೆ ಕಾನೂನು ಏನು ಹೇಳುತ್ತದೆ? ಪೋಕ್ಸೊ ಕಾಯ್ದೆಯಡಿ ಯಾವುದು ಅಪರಾಧ, ಯಾವುದು ಅಪರಾಧವಲ್ಲ ಎಂಬ ಸಮಗ್ರ ಮಾಹಿತಿ ಇಲ್ಲಿದೆ.

■ **ಸಿ.ಎಚ್. ಹನುಮಂತರಾಯ**
ಹೈಕೋರ್ಟ್‌ನ ಹಿರಿಯ ವಕೀಲ



ನಮ್ಮ ರಾಷ್ಟ್ರದ ಸಂದರ್ಭಕ್ಕೆ ಸಂಬಂಧಿಸಿದಂತೆ, ಭಾರತೀಯ ದಂಡ ಸಂಹಿತೆ 1860ರ (ಐಪಿಸಿ) ಕಾಯ್ದೆಯ ಅನ್ವಯ 10 ವರ್ಷದ ಕೆಳಗಿನ ವಯೋಮಾನದ ಬಾಲಕಿಯೊಂದಿಗೆ ಸಮ್ಮತಿಯೊಂದಿಗೆ ಲೈಂಗಿಕ ಕ್ರಿಯೆ ಏರ್ಪಟ್ಟರೂ ಅದೊಂದು ಅಪರಾಧವೆಂದು ಪರಿಗಣಿಸಿ ಅಪರಾಧಿಗೆ ಜೀವಾವಧಿಯಷ್ಟು ಶಿಕ್ಷೆ ವಿಧಿಸಲಾಗುತ್ತಿತ್ತು. ಈ ಕಾಯ್ದೆಯ ಅಪರಾಧಿಕ ಕಲಂಗೆ 1940ರಲ್ಲಿ ತಿದ್ದುಪಡಿಯಾಗಿ ಬಾಲಕಿಯ ವಯಸ್ಸು 10 ವರ್ಷಗಳ ಬದಲಾಗಿ 16 ವರ್ಷಗಳು ಎಂದಾಯಿತು. 2012ರಲ್ಲಿ 'ಮಕ್ಕಳ ವಿರುದ್ಧದ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ' (ಪೋಕ್ಸೊ) ಜಾರಿಗೆ ಬಂದು 'ಸಂತ್ರಸ್ತ ಮಗುವಿನ ವಯಸ್ಸು 16 ವರ್ಷಗಳ ಬದಲಾಗಿ 18 ವರ್ಷಕ್ಕೆ ಎಂದು ಬದಲಿಸಲಾಯಿತು' ಎಂದು ಕರ್ನಾಟಕ ಹೈಕೋರ್ಟ್‌ನ ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ವಿವರಿಸಿದ್ದಾರೆ.

ಪೋಕ್ಸೊ ಕಾಯ್ದೆಯಲ್ಲಿ ಅಡಕಗೊಂಡ ವಯಸ್ಸಿಗೆ ಅನುಗುಣವಾಗಿಯೇ ಲೈಂಗಿಕ ಅಪರಾಧಕ್ಕೆ ಸಂಬಂಧಿಸಿದ ಕಲಂಗಳಿಗೆ ತಿದ್ದುಪಡಿಯಾಗಿ ಅದರಲ್ಲಿಯೂ ಬಾಲಕಿಯ ವಯಸ್ಸನ್ನು 16ರಿಂದ 18 ವರ್ಷಕ್ಕೆ ಹೆಚ್ಚಿಸಲಾಯಿತು.